# ಭಗವತಿ ಲೀಲಾಮಯಿ



ಈ ಜಗತ್ತು ಆಕೆಯ ಕ್ರೀಡೆ. ಆಕೆ ಇಚ್ಛಾಮಯಿ. ಸೃಷ್ಟಿ, ಸ್ಥಿತಿ ಪ್ರಳಯ ಮಾಡುತ್ತಾಳೆ. ಲಕ್ಷ ಜನರಲ್ಲಿ ಎಲ್ಲೊ ಒಬ್ಬರಿಗೆ ಮಾತ್ರ ಮುಕ್ತಿಯನ್ನು ಕೊಡುತ್ತಾಳೆ. ಆಕೆಗೇ ಕಾಳಿ ಅಂತ ಹೆಸರು. ಕಾಳಿಯೇ ಬ್ರಹ್ಮ, ಬ್ರಹ್ಮನೇ ಕಾಳಿ. ವಸ್ತು ಒಂದೇ. ನಿಷ್ಕ್ರಿಯವಾಗಿರುವಾಗ, ಸೃಷ್ಟಿ, ಸ್ಥಿತಿ, ಪ್ರಳಯ ಮಾಡದಿರುವಾಗ ಅದೇ ವಸ್ತುವಿಗೆ ಬ್ರಹ್ಮ ಅಂತ ಹೆಸರು. ಆದರೆ ಆ ಎಲ್ಲಾ ಕಾರ್ಯಗಳನ್ನೂ ಮಾಡುತ್ತಿರುವಾಗ ಅದೇ ವಸ್ತುವಿಗೆ ಕಾಳಿ ಅಂತ ಹೆಸರು, ಶಕ್ತಿ ಅಂತ ಹೆಸರು.

ಭಗವತಿ ಈ ಜಗತ್ತಿನಲ್ಲಿ ವಿವಿಧ ಭಾವಗಳಿಂದ ಕ್ರೀಡಿಸುತ್ತಾಳೆ. ಆಕೆಯೇ ಮಹಾಕಾಳಿ, ನಿತ್ಯಕಾಳಿ, ಸ್ಮಶಾನಕಾಳಿ, ರಕ್ಷಾಕಾಳಿ, ಶ್ಯಾಮಾ ಕಾಳಿ—ಇವರ ವಿಷಯವಾಗಿ ತಂತ್ರಶಾಸ್ತ್ರದಲ್ಲಿ ವರ್ಣನೆ ಇದೆ. ಸೃಷ್ಟಿ ಆರಂಭವಾಗುವುದಕ್ಕೆ ಮುನ್ನ ಚಂದ್ರ, ಸೂರ್ಯ, ಗ್ರಹ, ಪೃಥ್ವಿ ಇವೆಲ್ಲಾ ಉದ್ಭವವಾಗುವುದಕ್ಕೆ ಮುನ್ನ, ಎಲ್ಲೆಲ್ಲೂ ನಿಬಿಡಾಂಧಕಾರ ಹಬ್ಬಿದ್ದಾಗ ಭಗವತಿ—ನಿರಾಕಾರ ಸ್ವರೂಪಿಣಿ ಮಹಾಕಾಳಿ ಮಹಾಕಾಲನೊಡನೆ ಐಕ್ಯವಾದಳು.

ಶ್ಯಾಮಾ ಕಾಳಿಯದು ಸ್ವಲ್ಪಮಟ್ಟಿಗೆ ಕೋಮಲಸ್ವಭಾವ. ಆಕೆ ವರಾ ಭಯದಾಯಿನಿ. ಗೃಹಸ್ಥರು ಆಕೆಯನ್ನು ಪೂಜಿಸುತ್ತಾರೆ. ಮಹಾಮಾರಿಯ ಉಪದ್ರವ, ದುರ್ಭಿಕ್ಷ, ಭೂಕಂಪ, ಅನಾವೃಷ್ಟಿ, ಅತಿವೃಷ್ಟಿಗಳಾದಾಗ ರಕ್ಷಾಕಾಳಿಯ ಪೂಜೆ ಮಾಡಬೇಕಾಗುತ್ತದೆ. ಸ್ಮಶಾನ ಕಾಳಿ ಸಂಹಾರ ಮೂರ್ತಿ. ಆಕೆ ಶವ, ನರಿ, ಡಾಕಿನಿ, ಯೋಗಿನಿ ಇವುಗಳೊಡಗೂಡಿ ಸ್ಮಶಾನದಲ್ಲಿ ವಾಸಿಸುತ್ತಾಳೆ. ಆಕೆಯ ಬಾಯಿಂದ ರಕ್ತದ ಕೋಡಿ ಹರಿಯುತ್ತಿರುತ್ತದೆ. ಕೊರಳಿಗೆ ರುಂಡಮಾಲೆ ಹಾಕಿಕೊಂಡಿರುತ್ತಾಳೆ. ಸೊಂಟಕ್ಕೆ ನರಹಸ್ತಗಳ ಒಡ್ಯಾಣ ಹಾಕಿಕೊಂಡಿರುತ್ತಾಳೆ.

ಈ ಜಗತ್ತು ನಾಶವಾದಾಗ, ಮಹಾಪ್ರಳಯವಾದಾಗ ಮುಂದಿನ ಸೃಷ್ಟಿಗಾಗಿ ಬೀಜಗಳನ್ನೆಲ್ಲಾ ಶೇಖರಿಸಿ ಇಟ್ಟುಕೊಂಡಿರುತ್ತಾಳೆ. ಇದು ಮನೆಯ ಯಜಮಾನಿ ತನಗೆ ಬೇಕಾಗುವ ಎಲ್ಲ ಬಗೆಯ ವಸ್ತುಗಳನ್ನು ಒಂದು ಗುಡಾಣದಲ್ಲಿ ಶೇಖರಿಸಿ ಇಟ್ಟುಕೊಳ್ಳುವುದಿಲ್ಲವೆ, ಹಾಗೆ. (ಭಕ್ತರೆಲ್ಲಾ ನಗುತ್ತಿದ್ದಾರೆ.)

ನಗಬೇಡಿ!ಯಜಮಾನಿಯರು ಇಂಥದೊಂದು ಗುಡಾಣ ಇಟ್ಟು ಕೊಂಡಿರುತ್ತಾರೆ. ಅದರೊಳಗೆ ಸಮುದ್ರದ ನೊರೆ, ನೀಲಿಗುಳಿಗೆ, ಸೌತೇ ಕಾಯಿ, ಕುಂಬಳಕಾಯಿ, ಸೋರೆಕಾಯಿ ಬೀಜಗಳ ಚಿಕ್ಕ ಚಿಕ್ಕ ಪೊಟ್ಟಣ ಗಳು ಇವನ್ನೆಲ್ಲಾ ಇಡುತ್ತಾರೆ. ಬೇಕಾದಾಗ ಅವನ್ನು ಹೊರಕ್ಕೆ ತೆಗೆಯು ತ್ತಾರೆ. ಅದೇ ರೀತಿಯಾಗಿ ಭಗವತಿ ಬ್ರಹ್ಮಮಯಿ, ಈ ಜಗತ್ತು ನಾಶವಾದ ನಂತರ ಎಲ್ಲಾ ವಿಧದ ಬೀಜಗಳನ್ನೂ ಮುಂದಿನ ಸೃಷ್ಟಿಗಾಗಿ ಶೇಖರಿಸಿ ಇಟ್ಟುಕೊಳ್ಳುತ್ತಾಳೆ. ಸೃಷ್ಟಿ ಮಾಡಿದ ನಂತರ ಆದ್ಯಾಶಕ್ತಿ ಈ ಜಗತ್ತಿನ ಒಳಗೇ ಇರುತ್ತಾಳೆ—ಈ ಜಗತ್ತನ್ನು ಹೆತ್ತು ಅದರೊಳಗೇ ಅಂತರ್ಗತವಾಗಿರುತ್ತಾಳೆ. ವೇದದಲ್ಲಿ ಇದೆ "ಊರ್ಣನಾಭಿ"ಯ (ಜೇಡರ ಹುಳುವಿನ) ಮತ್ತು ಅದರ ಬಲೆಯ ವಿಷಯ. ಜೇಡರ ಹುಳು ತನ್ನ ಹೊಟ್ಟೆಯಿಂದಲೇ ತೆಗೆದ ತಂತುವಿನಿಂದ ಬಲೆ ಕಟ್ಟಿ ಅದರ ಮೇಲೆ ತಾನೂ ನಿಲ್ಲುತ್ತದೆ. ಹಾಗೆಯೇ ಭಗವತಿ ಈ ಆಧಾರ ಆಧೇಯ ಎರಡೂ ಆಗಿದ್ದಾಳೆ.

ಕಾಳಿ ನಿಜವಾಗಿ ಕಪ್ಪೇನು? ದೂರದಿಂದ ನೋಡಿದರೆ ಕಪ್ಪಗೆ ಕಾಣುತ್ತಾಳೆ, ಹತ್ತಿರದಿಂದ ನೋಡಿದರೆ ಕಪ್ಪಲ್ಲ. ಆಕಾಶ ದೂರದಿಂದ ನೀಲ ವರ್ಣದ್ದಾಗಿ ಕಾಣುತ್ತದೆ. ಹತ್ತಿರದಲ್ಲಿ ನೋಡಿದರೆ ಅದಕ್ಕೆ ಯಾವ ವರ್ಣವೂ ಇಲ್ಲ. ಸಮುದ್ರದ ನೀರು ದೂರದಿಂದ ನೀಲಿಯಾಗಿ ಕಾಣುತ್ತದೆ. ಹತ್ತಿರ ಹೋಗಿ ಕೈಗೆ ತೆಗೆದು ಕೊಂಡು ನೋಡಿ, ಅದಕ್ಕೆ ಯಾವ ವರ್ಣವೂ ಇಲ್ಲ.

ಪರಮಹಂಸರು ಪ್ರೇಮೋನ್ಮತ್ತರಾಗಿ ಈಗ ಹಾಡಲಾರಂಭಿಸಿದ್ದಾರೆ:

> ಕಾಲರೂಪೆ ದಿಗಂಬರೀ
> ಹೃದಯಪದ್ಮ ಭಾಸ್ಕರೀ
> ನಿಜವಾಗಿಯೂ ಕಪ್ಪಗಿಹಳೆ ನನ್ನ ತಾಯಿ ಕಾಳಿ?

ಶ್ರೀರಾಮಕೃಷ್ಣರು ಮಾತು ಮುಂದುವರಿಸುತ್ತಿದ್ದಾರೆ: "ಬಂಧನ ಮತ್ತು ಮುಕ್ತಿ ಇವೆರಡರ ಕರ್ತಳೂ ಅವಳೇ. ಆಕೆಯ ಮಾಯೆಯ ದೆಸೆಯಿಂದ ಸಾಂಸಾರಿಕ ಜೀವರು ಕಾಮ ಕಾಂಚನಗಳಿಂದ ಬದ್ಧ ರಾಗುತ್ತಾರೆ. ಮತ್ತೆ ಆಕೆಯ ಕೃಪೆಯಿಂದಲೇ ಮುಕ್ತರಾಗುತ್ತಾರೆ. ಆಕೆ ನಮ್ಮ ಭವಬಂಧನವನ್ನು ಹರಿದು ಕಾಪಾಡತಕ್ಕವಳು.

"ಭಗವತಿ ಇಚ್ಛೆಪಟ್ಟರೆ ಆಕೆ ಎಲ್ಲರನ್ನೂ ಮುಕ್ತರನ್ನಾಗಿ ಮಾಡಿ ಬಿಡುತ್ತಾಳೆ. ಹಾಗಿರುವಾಗ ಜೀವಿಗಳನ್ನೇಕೆ ಸಂಸಾರದಲ್ಲಿ ಬಂಧಿಸಿ ಇಟ್ಟಿದ್ದಾಳೆ? ಆಕೆಯ ಇಚ್ಛೆ. ತಾನು ಸೃಷ್ಟಿಸಿದ ವಸ್ತುಗಳೊಡನೆ ತಾನು ಆಟವಾಡುತ್ತಲೇ ಇರಬೇಕು ಅಂತ ಆಕೆಯ ಇಚ್ಛೆ. ಕಣ್ಣು ಮುಚ್ಚಾಲೆ ಆಟದಲ್ಲಿ ಯಾರು ಹೋಗಿ ಅಜ್ಜಿಯನ್ನು ಮುಟ್ಟಿ ಬಿಡುತ್ತಾರೊ, ಅವರು ಅನಂತರ ಓಡಾಡಬೇಕಾಗಿರುವುದಿಲ್ಲ. ಎಲ್ಲರೂ ಹೋಗಿ ಅಜ್ಜಿಯನ್ನು ಮುಟ್ಟಿಬಿಟ್ಟರೆ ಆಟ ಹೇಗೆ ಮುಂದುವರಿಯಬೇಕು? ಅದು ಆಕೆಗೆ ಅಸಂತೋಷವನ್ನುಂಟು ಮಾಡುತ್ತದೆ. ಆಟ ಮುಂದುವರಿದರೇನೇ ಆಕೆಗೆ ಸಂತೋಷ. ಅದ ಕ್ಕಾಗಿಯೇ ರಾಮಪ್ರಸಾದ ಹೇಳಿರುವುದು:

> ಇಂತು ಹಾರುವ ನೂರಾರು ಸಾವಿರದ ಪಟಗಳಲಿ
> ಒಂದೊ ಎರಡೋ ಹರಿದು ಬಿಡುಗಡೆಯ ಪಡೆದು
> ಹೋಗುತಿರಲವುಗಳನು ನಿರುಕಿಸುತ ಈ ತಾಯಿ
> ಕೈಯ ಚಪ್ಪಾಳೆ ತಟ್ಟಿ ನಲಿಯುತಿಹಳು.

"ಭಗವತಿ ಕಣ್ಣುಸನ್ನೆ ಮಾಡಿ ಮನಸ್ಸಿಗೆ ರಹಸ್ಯವಾಗಿ ಆಜ್ಞೆ ಮಾಡಿಬಿಟ್ಟಿರುವಂತಿದೆ. 'ಹೋಗು, ಹೋಗಿ ಸಂಸಾರಸುಖ ಅನುಭವಿಸು.' ಆದ್ದರಿಂದ ಮನಸ್ಸಿನದೇನು ತಪ್ಪು? ಆದರೆ ಆಕೆ ಮತ್ತೆ ಕೃಪೆ ಇಟ್ಟು ಅದನ್ನು ತನ್ನ ಕಡೆಗೆ ಹರಿಯುವಂತೆ ಮಾಡಿ ಕೊಟ್ಟರೆ, ಆಗ ಮಾತ್ರವೇ ಅದು ಭಗವತಿಯ ಪಾದಪದ್ಮಗಳಲ್ಲಿ ನೆಲೆಸಿ ಇರುತ್ತದೆ."

ಶ್ರೀರಾಮಕೃಷ್ಣ ವಚನವೇದ ದಿಂದ